ಹೂವಿನ ವಾಸನೆ ಸಾಕುಪ್ರಾಣಿಗಳ ಆರೋಗ್ಯಕ್ಕೆ ತೊಂದರೆ ಉಂಟುಮಾಡಬಹುದು. ಹಾಗಾಗಿ ಅವನ್ನು ಇದರತ್ತ ಸುಳಿಯಗೊಡಬೇಡಿ.

### ಜೇಡರ ಸಸ್ಯ

ಏರ್‌ಪ್ಲೇನ್ ಸಸ್ಯವೆಂದೂ ಇದನ್ನು ಕರೆಯಲಾಗುತ್ತದೆ. ಇದು ಗಾಳಿಯಲ್ಲಿರುವ ಕಾರ್ಬನ್ ಮಾನಾಕ್ಸೈಡ್ ಅನ್ನು ತೆಗೆದು ಹಾಕುತ್ತದೆ. ಜತೆಗೆ ಉಸಿರಾಟಕ್ಕೆ ತೊಂದರೆಯೊಡ್ಡುವ ರಾಸಾಯನಿಕ ಅಂಶಗಳನ್ನು ಇಲ್ಲವಾಗಿಸುತ್ತದೆ. ಇದನ್ನು ಬೆಳೆಸಲು ಹೆಚ್ಚಿನ ಆರೈಕೆ ಬೇಕಿಲ್ಲ. ತುಂಬಾ ಗಾಳಿ, ಬೆಳಕು ಬೇಕಿಲ್ಲ. ವಾರಕ್ಕೆ ಮೂರು ಬಾರಿ ನೀರುಣಿಸಿದರೆ ಸಾಕು. ಇದು ಸಂಪೂರ್ಣ ವಿಷಮುಕ್ತವಾಗಿದ್ದು, ಸಾಕು ಪ್ರಾಣಿಗಳು ಇದರತ್ತ ಬಂದರೆ ಚಿಂತಿಸಬೇಕಿಲ್ಲ.

### ಕೆಂಪು ತುದಿಯ ಡ್ರಸೀನಾ ಸಸ್ಯ

ಅತಿಯಾಗಿ ಮಲಿನಗೊಂಡ ಗಾಳಿಯನ್ನು ಇದು ಕ್ಷಿಪ್ರವಾಗಿ ತಿಳಿಗೊಳಿಸುತ್ತದೆ. ಟ್ಯಾಲ್ಯುಯಿನ್ ಎಂಬ ವಿಷಕಾರಿ ಅಂಶವನ್ನು ಗಾಳಿಯಿಂದ ಬೇರ್ಪಡಿಸುತ್ತದೆ. ಕೋಣೆಯ ತಾಪಮಾನಕ್ಕೆ ಹೊಂದಿಕೊಂಡು ತೇವಯುಕ್ತ ಮಣ್ಣಿನಲ್ಲಿ 12 ಅಡಿ ಉದ್ದ ಬೆಳೆಯಬಲ್ಲದು. ಇದನ್ನು ನೇರವಾಗಿ ಸೂರ್ಯನ ಬೆಳಕಿಗೆ ಒಡ್ಡದಂತೆ ಇಡಬೇಕು.







## ಹೆಚ್ಚುವ ಆರೋಗ್ಯ ಸಮಸ್ಯೆ

ಮನೆಯ ವಾತಾವರಣದಲ್ಲಿ ವಿಷಕಾರಕ ಅಂಶವಿದ್ದರೆ ಆರೋಗ್ಯ ಹದಗೆಡುತ್ತದೆ. ಮನೆಯ ಒಳಗಿನ ವಾತಾವರಣ ಶುದ್ಧವಾಗಿಟ್ಟುಕೊಳ್ಳದೇ ಹೋದರೆ ‘ಅನಾರೋಗ್ಯ ಸದನ’ವಾಗುವ ಅಪಾಯವೇ ಹೆಚ್ಚು. ಇದರಿಂದ ಮನೆಯ ಸದಸ್ಯರು ಆಗಾಗ್ಗೆ ಹುಷಾರು ತಪ್ಪುವುದು, ಅಲರ್ಜಿ, ಆಸ್ತಮಾ, ನಿರಂತರ ಸೀನುವಿಕೆ, ತಲೆಶೂಲದಂಥ ಸಮಸ್ಯೆಗಳನ್ನು ಎದುರಿಸಬೇಕಾಗಬಹುದು.

### ವಿಷಾನಿಲ ಉತ್ಪತ್ತಿ ಮಾಡುವ ವಸ್ತುಗಳು...

- ನೆಲಹಾಸಿನ ದೂಳಿ ಕಣದಿಂದಾಗಿಫಾರ್ಮಾಲ್ಡಿಹೈಡ್ ಎಂಬ ವಿಷಾನಿಲ ಉತ್ಪತ್ತಿಯಾಗುತ್ತದೆ.
- ಪರ್ಫ್ಯೂಮ್, ಹೇರ್‌ಸ್ಪ್ರೇ, ಏರ್ ಫ್ರೆಶ್‌ನರ್ ಮತ್ತು ಫರ್ನಿಚರ್ ಪಾಲಿಶ್‌ಗಳಿಂದಾಗಿ ವೊಲೈಟಲ್ ಆರ್ಗಾನಿಕ್ ಕಾಂಪೌಡ್ಸ್ (ವಿಒಸಿಎಸ್) ಎಂಬ ವಿಷಕಾರಿ ಕಣವು ಗಾಳಿಯೊಳಗೆ ಸೇರ್ಪಡೆಯಾಗುತ್ತದೆ.
- ದೂಳು, ಶಿಲೀಂಧ್ರದಿಂದ ಕಾರ್ಬನ್ ಮೋನಾಕ್ಸೈಡ್ ಮತ್ತು ನೈಟ್ರೋಜನ್ ಡಯಾಕ್ಸೈಡ್ ಉತ್ಪತ್ತಿಯಾಗುತ್ತದೆ.

ಪರದೆಗಳನ್ನು ಹೊಂದಿರುವ ಕಿಟಕಿಯ ಬಳಿ ಇಡಬಹುದು.

### ಹಾವಿನಂತಿರುವ ಎಲೆಯ ಸಸ್ಯ

ಇದನ್ನು ಅತ್ತೆ ನಾಲಿಗೆಯ ಸಸ್ಯವೆಂದೂ ಕರೆಯಲಾಗುತ್ತದೆ.ಈ ಹೆಸರು ಏಕೆ ಬಂದಿದೆ ಎಂಬುದಕ್ಕೆ ಸ್ಪಷ್ಟ ಕಾರಣವಿಲ್ಲ. ಇದರ ಎಲೆಗಳು ತುಸು ಉದ್ದವಿದ್ದು, ಅಂಕುಡೊಂಕಾಗಿರುತ್ತದೆ. ಇದರಲ್ಲಿರುವ ನಾರಿನ ಅಂಶವನ್ನು ಬಳಸಿಕೊಂಡು ಹಗ್ಗ ಹಾಗೂ ಬುಟ್ಟಿಗಳನ್ನು ಹೆಣೆಯಲಾಗುತ್ತದೆ. ಸಾಮಾನ್ಯವಾಗಿ ಗಾಳಿಯಲ್ಲಿರುವ ಐದರಲ್ಲಿ ನಾಲ್ಕು ವಿಷಕಾರಿ ಅಂಶವನ್ನು ತೊಡೆದು ಹಾಕಲು ಇದು ನೆರವಾಗುತ್ತದೆ. ಮಾಲಿನ್ಯಯುಕ್ತ ಗಾಳಿಯೊಂದಿಗೆ ಯೋಧನಂತೆ ಹೋರಾಡುವ ಸಸ್ಯವೆಂದೇ ಇದನ್ನು ಕರೆಯಲಾಗುತ್ತದೆ. ಶುಷ್ಕ ವಾತಾವರಣಕ್ಕೆ ಹೊಂದಿಕೊಳ್ಳಬಲ್ಲ ಈ ಸಸ್ಯಕ್ಕೆ ಹೆಚ್ಚು ನೀರು ಉಣಿಸಿದರೆ ಕೊಳೆತು ಹೋಗುತ್ತದೆ.

### ಬಿದಿರ ತಾಳೆ ಸಸ್ಯ

ಇದು ಕೂಡ ಉತ್ತಮ ವಾತಾವರಣಕ್ಕೆ ಪೂರಕವಾಗಿರುವ ಸಸ್ಯವಾಗಿದ್ದು, ಸ್ವಲ್ಪ ಹೆಚ್ಚು ಕಾಳಜಿಯನ್ನು ಬಯಸುತ್ತದೆ. ಮಣ್ಣು ಸದಾ ತೇವಾಂಶದಿಂದ ಕೂಡಿದ್ದರೆ ಬಹುಬೇಗ ಬೆಳೆಯುತ್ತದೆ. ನೀರುಣಿಸುವ ಕೆಲಸ ಆಗಾಗ ಮಾಡುತ್ತಿರಬೇಕು. ಸೂರ್ಯನ ಕಿರಣ ನೇರವಾಗಿ ತಗುಲದಂತೆ ಇಡಬೇಕು. ಸಾಕುಪ್ರಾಣಿಗಳ ಆರೋಗ್ಯಕ್ಕೆ ಇದು ಯಾವುದೇ ತೊಂದರೆ ಉಂಟುಮಾಡುವುದಿಲ್ಲ.

### ಲೋಳೆಸರ ಗಿಡ

ಇದು ಔಷಧೀಯ ಸಸ್ಯವಾಗಿದ್ದು, ಚರ್ಮ ವ್ಯಾಧಿಗಳಿಗೆ ಉತ್ತಮ ಔಷಧ. ಹಾಗೆಯೇ ಕೊಳಕು ನೆಲಹಾಸಿನಿಂದ



ಉಂಟಾಗುವ ದೂಳಿನ ಕಣಗಳನ್ನು ಇಲ್ಲವಾಗಿಸಿ, ವಾತಾವರಣವನ್ನು ಶುದ್ಧಿಗೊಳಿಸುತ್ತದೆ. ಆದರೆ, ಸೂರ್ಯನ ಕಿರಣಗಳು ಹೆಚ್ಚು ಬೀಳುವ ಜಾಗದಸಲ್ಲಿ ಇದನ್ನು ಇಡಬೇಕು. ಇದರ ಬೆಳವಣಿಗೆಗೆ ಹೆಚ್ಚಿನ ಪ್ರಮಾಣದ ಸೂರ್ಯನ ಶಾಖದ ಅಗತ್ಯವಿದೆ. ಇದಕ್ಕೆ ದೊಡ್ಡ ಹೂಕುಂಡವೇನೂ ಬೇಕಾಗಿಲ್ಲ. ಚಿಕ್ಕ ಜಾಗದಲ್ಲಿಯೂ ಬೆಳೆದುಬಿಡುತ್ತದೆ.

### ವಾರ್ನೆಕ್ ಡ್ರಸೀನಾ

ಇದು ಹತ್ತು ಅಡಿ ಉದ್ದ ಬೆಳೆಯಬಲ್ಲ ಸಸ್ಯ. ಗಾಳಿಯಲ್ಲಿರುವ ವಿಒಸಿಯಂಥ ವಿಷಕಾರಿಯನ್ನು ಕಡಿಮೆ ಮಾಡುತ್ತದೆ. ಇದು ಬೆಳೆಯಲು ಹೆಚ್ಚಿನ ಆರೈಕೆ ಮಾಡಬೇಕಾಗಿಲ್ಲ. ಕಡಿಮೆ ಬೆಳಕಿನಲ್ಲಿ ಕೋಣೆಯ ಉಷ್ಣಾಂಶದಲ್ಲಿಯೇ ಇದು ಸರಾಗವಾಗಿ ಬೆಳೆಯುತ್ತದೆ.